**11609** **M-115**

Sl.No. 06550 **Total No. of Pages : 3**

**ನಾಲ್ಕನೆಯ ಚತುರ್ಮಾಸ ಬಿ.ಎ./ಬಿ.ಎಸ್ಸಿ/ಬಿ.ಪಿ.ಎ./ಬಿ.ಎಸ್.ಡಬ್ಲು/ಬಿ.ಎಸ್ಸಿ./(ಎಫ್.ಸಿ.ಎಸ್ಸಿ)**

**ಪರೀಕ್ಷೆ, ಏಪ್ರಿಲ್/ಮೇ 2018**

**(ಚತುರ್ಮಾಸ ಸ್ಕೀಮ್)**

**(Freshers of April/May 2018 & Onwards)**

**ಕನ್ನಡ ಭಾಷೆ (ಪತ್ರಿಕೆ–೪)**

**ಸವಿಸ್ತರ, ಅವಿಸ್ತರ ಪಠ್ಯಗಳು ಮತ್ತು ಭಾಷಾ ಘಟಕ–೨**

**ಸಮಯ: 3 ಗಂಟೆಗಳು** **ಗರಿಷ್ಠ ಅಂಕಗಳು : 80**

**ಸೂಚನೆ: (2017-18 ರ ವಿದ್ಯಾರ್ಥಿಗಳಿಗೆ)**

**ಸವಿಸ್ತರ ಪಠ್ಯ: ಹಳಗನ್ನಡ ಸಾಹಿತ್ಯ ಸಂಪುಟ–೧ (40 ಅಂಕಗಳು)**

*ಪ್ರ1)* ಅ) ಒಂದರ ಭಾವವನ್ನು ಸಂದರ್ಭಸಹಿತ ವಿವರಿಸಿ: **[4]**

೧) ಬೆಳಗುವ ಸೊಡರ್ಗಳ ಬೆಳಗ
ಗ್ಗಳಿಸುವ ವೋಲ್ ಪೋಪ ಪೊಟ್ಟಿಜೊಳ್ತೇಜಂ ಪ
ಜ್ಜಳಿಸೆ ತಟ ತಟಿಸಿ ತೊಳತೊಳ
ತೊಳಗಿದನಸ್ತಮಯ ಸಮಯದೊಳ್ ದಿನಪಸುತಂ

೨) ಆಗಳ್ ಬಾಳ್ ನಿಮಿರ್ದುದ್ ತೋಳ್
ತೂಗಿದುದು ಮನಂ ಕನಲ್ದುದಿರ್ವರುಮನೆರ
ವ್ವಾಗಂ ಮಾಡಲ್ ಧೃತಿ ಬಂ
ದಾಗಳ್ ಮಾಣೆಂಬ ತೆಱದೆ ಪೇಸಿದನರಸಂ

ಆ) ಆರು ಪದಗಳಿಗೆ ಅರ್ಥ ಬರೆಯಿರಿ: **[6 × ½ = 3]**

ಕಲಿ, ಧುರ, ಬಲ್ಸರಿ, ವರೂಥ, ಪೊಟಲು, ಪುಳಿಂದ,
ನೊಸಲು, ಧಾತ್ರಿ, ಇಱುಂಪೆ, ಕಾದಲ.

ಇ) ಎರಡು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ: **[2 × 1½ = 3]**

ಗುಣಮಧುರ, ದುರ್ಲಂಘ್ಯಪುರ, ಗುಂಡಮಬ್ಬೆ.

*P.T.O.*

ಪ್ರ2) ನಾಲ್ಕರ ಸಂದರ್ಭ ಸ್ವಾರಸ್ಯವನ್ನು ಬರೆಯಿರಿ: [4 × 2½ = 10]

೧) ಪ್ರಣಯಿ ಜನಕ್ಕೆ ಕಾಮನಸಿತೋತ್ಪಲ ವರ್ಣ್ಣನವನ್

೨) ಕರ್ಬಿನ ಬಿಲ್ಗಂ ನನೆಯ ನಾರಿಗಂ ಪುಟ್ಟುವವೋಲ್

೩) ಪಡೆವಳ ತೈಲಪನ ಜನನಿಗೆಣೆ ಪೆಱರೊಳರೇ

೪) ಕರ್ಣ ರಸಾಯನಮಲ್ತೆ ಭಾರತಂ

೫) ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ

೬) ಮದಕರಿಯ ಮೃಗವೈರಿ ಪಿಡಿವ ತೆಂದಿ ಪಿಡಿದಂ

ಪ್ರ3) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಪಂಪನು ಚಿತ್ರಿಸಿದ ಕರ್ಣನ ವ್ಯಕ್ತಿತ್ವದ ಔನ್ನತ್ಯವನ್ನು ನಿರೂಪಿಸಿ.

೨) ಅತ್ತಿ ಮಬ್ಬೆಯ ಪವಿತ್ರ ಚರಿತ್ರೆಯನ್ನು ರನ್ನನು ಹೇಗೆ ಕೊಂಡಾಡಿದ್ದಾನೆ? ವಿವರಿಸಿ.

ಪ್ರ4) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: [2×5=10]

೧) ಬಾದಾಮಿ ಶಾಸನವು ಕಟ್ಟಿಕೊಡುವ ಕಪ್ಪೆ ಅರಭಟ್ಟನ ಚಿತ್ರಣ.

೨) ರಾವಣನು ನಳಕೂಬರನನ್ನು ಮಣಿಸಿದ ಪ್ರಸಂಗವನ್ನು ವಿವರಿಸಿ.

೩) ತಮಟಕಲ್ಲು ಶಾಸನದಲ್ಲಿ ಚಿತ್ರಿತವಾಗಿರುವ ಗುಣಮಧುರನ ವ್ಯಕ್ತಿತ್ವ.

೪) ಅಮೃತಮತಿಯು ಬದಗನಿಗೆ ಮನಸೋತ ಸನ್ನಿವೇಶ.

**ಅವಿಸ್ತರ ಪಠ್ಯ: ಆಸ್ಪತ್ರೆಯಲ್ಲಿ ಐವತ್ನಾಲ್ಕು ದಿನಗಳು (20 ಅಂಕಗಳು)**

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಲೇಖಕರು ಅಪೋಲೊ ಆಸ್ಪತ್ರೆಗೆ ದಾಖಲಾದ ಸಂದರ್ಭವನ್ನು ವಿವರಿಸಿ.

೨) ಐಸಿಯುನಲ್ಲಿ ಲೇಖಕರ ಎದೆಕರಗಿಸಿದ ಪ್ರಸಂಗಗಳಾವುವು? ನಿರೂಪಿಸಿ.

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಆಸ್ಪತ್ರೆಯ ಸೇವಾವ್ಯವಸ್ಥೆಯ ಬಗ್ಗೆ ಲೇಖಕರ ಅಭಿಪ್ರಾಯವನ್ನು ಸಂಗ್ರಹಿಸಿ.

೨) 'ಆಸ್ಪತ್ರೆಯಲ್ಲಿ ಐವತ್ನಾಲ್ಕು ದಿನಗಳು'– ಕೃತಿಯಲ್ಲಿ ಲೇಖಕರ ಜೀವನಶ್ರದ್ಧೆಯ ಚಿಂತನೆಯು ಹೇಗೆ ಹೊರಹೊಮ್ಮಿದೆ? ವಿಶ್ಲೇಷಿಸಿ.

ಭಾಷಾಘಟಕ-೨ (20 ಅಂಕಗಳು)

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ವಾಕ್ಯ ಎಂದರೇನು? ವಾಕ್ಯರಚನೆಯ ವೈವಿಧ್ಯವನ್ನು ಉದಾಹರಣೆಯೊಂದಿಗೆ ವಿವರಿಸಿ.

೨) ಲೇಖನ ಚಿಹ್ನೆಗಳಾವುವು? ಬಳಕೆಯ ಮಾದರಿಯನ್ನು ಪರಿಚಯಿಸಿ.

ಪ್ರ8) ಎರಡು ವಿಷಯಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. [2×5=10]

೧) ಸುತ್ತೋಲೆ ಎಂದರೇನು? ಮಾದರಿಯೊಂದಿಗೆ ವಿವರಿಸಿ.

೨) ವರದಿ ಎಂದರೇನು? ವರದಿಯ ಬಗೆಗಳಾವುವು?

೩) ಅರೆಸರ್ಕಾರಿ ಪತ್ರ.

೪) ವ್ಯವಹಾರ ಪತ್ರದ ಸ್ವರೂಪ.

✓ ✓ ✓